# ಜೊಲ್ಲೆ ಗ್ರುಪ್ ವಾರ್ತಾ ಪತ್ರ

# ದರ್ಪಣ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಎಪ್ರೀಲ್ 2025–ಸಂಪುಟ–9 ಸಂಚಿಕೆ–04





ನಿಪ್ಪಾಣಿಯಲ್ಲಿ ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಜೊಲ್ಲೆ ಇಂಡಸ್ಟ್ರೀಸ್‌ನ ಉದ್ಘಾಟನೆಯ ನಿಮಿತ್ಯ, ಭಾರತೀಯ ಸನಾತನ ಸಂಸ್ಕೃತಿಯ ಪ್ರಕಾರ ಗೋ ಪೂಜೆ, ಶಿವ–ಪಾರ್ವತಿ, ಗಣಪತಿಯ ಪೂಜೆ ಮತ್ತು ಹೋಮ ಕಾರ್ಯಕ್ರಮವನ್ನು ಕುಟುಂಬ ಸಮೇತ ಪೂಜೆ ನೆರವೇರಿಸಿದ ಚಾಲನೆ ನೀಡುತ್ತಿರುವುದು

## ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ್)




| | |
|---|---|
| ಶಾಖೆಗಳು | 226 (ಕರ್ನಾಟಕ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಾದ್ಯಂತ) |
| ಠೇವು | 4338+ ಕೋಟಿ |
| ಸಾಲ | 3313+ ಕೋಟಿ |
| ಸದಸ್ಯರು | 04+ ಲಕ್ಷ |
| ಗುಂತಾವಣೆ | 1244+ ಕೋಟಿ |
| ಲಾಭ 2024-25 | 45+ ಕೋಟಿ |

## ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ) ಐದು ವರ್ಷದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ 21 ಜನ

# ನಿರ್ದೇಶಕರು ಅವಿರೋಧವಾಗಿ ಆಯ್ಕೆ

ಯಕ್ಷಂಬಾ ಪಟ್ಟಣದ ಜೊಲ್ಲೆ ಗ್ರುಪ್‌ನ ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ) ಐದು ವರ್ಷದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ 21 ಜನ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ, ಚಿಕ್ಕೋಡಿ ಸಹಕಾರಿ ಸಂಘಗಳ ಸಹಾಯಕ ನಿಬಂಧಕರಾದ ಮಲ್ಲಪ್ಪ ರಾಹುತನವರ ತಿಳಿಸಿದರು.

ಯಕ್ಷಂಬಾ ಪಟ್ಟಣದ ಶ್ರೀ ಬ್ರೀರೇಶ್ವರ ಸಂಸ್ಥೆಯ ಸಭಾ ಭವನದಲ್ಲಿ ನೂತನ ಆಡಳಿತ ಮಂಡಳಿ ನಿರ್ದೇಶಕರಿಗೆ ಪ್ರಮಾಣ ಪತ್ರ ವಿತರಿಸಿ ಅವರು ನೂತನ ಆಡಳಿತ ಮಂಡಳಿ ನಿರ್ದೇಶಕರ ಹೆಸರನ್ನು ಘೋಷಣೆ ಮಾಡಿದರು.

**ನೂತನ ಆಡಳಿತ ಮಂಡಳಿ ನಿರ್ದೇಶಕರು:–**

ಯಕ್ಸಂಬಾ ಪಟ್ಟಣದ ಅಣ್ಣಾಸಾಹೇಬ ಶಂಕರ ಜೊಲ್ಲೆ, ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ, ಅಪ್ಪಾಸಾಹೇಬ ಶಿವರಾಮ ಜೊಲ್ಲೆ, ಯಾಶೀನ ತಾಂಬೋಳಿ, ಕೇರೂರ ಗ್ರಾಮದ ಸಿದ್ರಾಮ ಗಡದೆ, ನಿಪ್ಪಾಣಿ ನಗರದ ವಿಭಾವರಿ ದೀಲಿಪ ಖಾಂಡಕೆ, ವಜ್ರಕಾಂತ ಸದಲಗೆ, ಸದಲಗಾ ಪಟ್ಟಣದ ಆನಂದ ದೇವಗೌಡ ಪಾಟೀಲ, ಇಂಗಳಿ ಗ್ರಾಮದ ಅಣ್ಣಾಸಾಹೇಬ ಚೌಗಲಾ, ಇಚಲಕರಂಜಿ ನಗರದ ವೃಷಭ ಜೈನ, ವಿಜಯಪುರ ನಗರದ ಪ್ರಕಾಶ ಪಾಟೀಲ, ಬಾಳಿಗೇರಿ ಗ್ರಾಮದ ನಿಂಗಪ್ಪ ಕೋಕಲೆ, ಖಡಕಲಾಟ ಗ್ರಾಮದ ಕಾಶಿನಾಥ ಕಮತೆ, ಕಣೇರಿ ಗ್ರಾಮದ ದತ್ತಾತ್ರೇಯ ಪಾಟೀಲ, ಮಮದಾಪೂರ ಗ್ರಾಮದ ಬಾಳಾಸಾಹೇಬ ಕದಮ, ಹಂದಿಗುಂದ ಗ್ರಾಮದ ಮಲ್ಲಿಕಾರ್ಜುನ ತೇಲಿ, ರಾಯಬಾಗದ ಪಟ್ಟಣದ ಸದಾನಂದ ಹಳಿಂಗಳಿ, ಸಂಕೇಶ್ವರದ ಪಟ್ಟಣದ ಜಯಪ್ರಕಾಶ ಸಾವಂತ, ಮಲಿಕವಾಡ ಗ್ರಾಮದ ಚೇತನ ದೇಶಪಾಂಡೆ, ಚಿಕ್ಕೋಡಿ ಪಟ್ಟಣದ ಶ್ರೀನಿವಾಸ ಕರಾಳೆ, ಶ್ರೀಪಾದ ನೇರ್ಲೇಕರ ಆಯ್ಕೆಯಾಗಿದ್ದಾರೆ.

ಸಂಸ್ಥೆಯ ಸಂಸ್ಥಾಪಕರಾದ ಅಣ್ಣಾಸಾಹೇಬ ಜೊಲ್ಲೆ ಅವರು ಮಾತನಾಡುತ್ತ, ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದಲ್ಲಿ ಶಾಖೆಗಳನ್ನು ಆರಂಭಿಸಿ ಸಂಸ್ಥೆಯು ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ. ರಾಷ್ಟ್ರೀಯ ಬ್ಯಾಂಕುಗಳಲ್ಲಿ ಸಿಗುವ ಪ್ರತಿಯೊಂದು ಸೌಲಭ್ಯ ಶ್ರೀ ಬೀರೇಶ್ವರ ಸೊಸಾಯಟಿಯಲ್ಲಿ ಗ್ರಾಹಕರಿಗೆ ಕಲ್ಪಿಸಲಾಗಿದೆ ಎಂದರು.

ಸಂಸ್ಥೆಯು ಮೂರು ರಾಜ್ಯದಲ್ಲಿ 226 ಶಾಖೆಗಳನ್ನು ಆರಂಭಿಸಿ ದಕ್ಷಿಣ ಭಾರತದಲ್ಲಿ ದೊಡ್ಡ ಸಹಕಾರಿ ಸಂಸ್ಥೆಯಾಗಿ ಬೆಳೆದಿದೆ. ಸಹಕಾರಿ ಎಲ್ಲ ಸದಸ್ಯರು ಸಂಸ್ಥೆಯ ಏಳಿಗೆಗಾಗಿ ಶ್ರಮಿಸಬೇಕು ಎಂದು ಮನವಿ ಮಾಡಿದರು.



# ರಾಷ್ಟ್ರೀಯ ಲಸಿಕೆ ದಿನ 2025

ಸಾರ್ವಜನಿಕ ಆರೋಗ್ಯದಲ್ಲಿ ಲಸಿಕೆಗಳ ನಿರ್ಣಾಯಕ ಪಾತ್ರವನ್ನು ಎತ್ತಿ ತೋರಿಸಲು ಪ್ರತಿ ವರ್ಷ ಮಾರ್ಚ್ 16 ರಂದು ಭಾರತವು ರಾಷ್ಟ್ರೀಯ ಲಸಿಕೆ ದಿನವನ್ನು ಆಚರಿಸುತ್ತದೆ. ಈ ದಿನವು 1995 ರಲ್ಲಿ ಪಲ್ಸ್ ಪೋಲಿಯೊ ಇಮ್ಯುನೈಸೇಶನ್ ಕಾರ್ಯಕ್ರಮದ ಆರಂಭವನ್ನು ಸ್ಮರಿಸುತ್ತದೆ, ಇದು ಪೋಲಿಯೊ ನಿರ್ಮೂಲನೆಗೆ ರಾಷ್ಟ್ರವನ್ನು ಮುನ್ನಡೆಸಿದ ಒಂದು ಹೆಗ್ಗುರುತು

ರಾಷ್ಟ್ರೀಯ ಲಸಿಕೆ ದಿನವು ರೋಗ ನಿರೋಧಕತೆಯ ಮೂಲಕ ಸಾರ್ವಜನಿಕ ಆರೋಗ್ಯಕ್ಕೆ ಭಾರತದ ಅಚಲ ಸಮರ್ಪಣೆಗೆ ಸಾಕ್ಷಿಯಾಗಿದೆ. ಲಸಿಕೆ-ತಡೆಗಟ್ಟಬಹುದಾದ ರೋಗಗಳನ್ನು ಎದುರಿಸಲು ಅಗತ್ಯವಿರುವ ಸಾಮೂಹಿಕ ಪ್ರಯತ್ನಗಳು ಮತ್ತು ಆರೋಗ್ಯಕರ ರಾಷ್ಟ್ರದತ್ತ ನಿರಂತರ ಪ್ರಯಾಣದ ಜ್ಞಾಪನೆಯಾಗಿ ಇದು ಕಾರ್ಯನಿರ್ವಹಿಸುತ್ತದೆ. 2025 ರ ರಾಷ್ಟ್ರೀಯ ಲಸಿಕೆ ದಿನವನ್ನು ನಾವು ಆಚರಿಸುತ್ತಿರುವಾಗ, ಲಸಿಕೆಗೆ ನಮ್ಮ ಬದ್ಧತೆಯನ್ನು ಪುನರುಚ್ಚರಿಸೋಣ, ಇದು ಸಾರ್ವಜನಿಕ ಆರೋಗ್ಯದ ಮೂಲಾಧಾರ ಮತ್ತು ಭವಿಷ್ಯದ ಪೀಳಿಗೆಯನ್ನು ರಕ್ಷಿಸುವಲ್ಲಿ ಪ್ರಮುಖ ಸಾಧನವೆಂದು ಗುರುತಿಸೋಣ.

**ರಾಷ್ಟ್ರೀಯ ಲಸಿಕೆ ದಿನದ ಇತಿಹಾಸ**

ರಾಷ್ಟ್ರೀಯ ಲಸಿಕೆ ದಿನದ ಆರಂಭವು ಮಾರ್ಚ್ 16, 1995 ರಿಂದ ಆರಂಭವಾಗಿದ್ದು, ಇದು ಭಾರತದ ಆರೋಗ್ಯ ರಕ್ಷಣಾ ಪ್ರಯಾಣದಲ್ಲಿ ಒಂದು ಪ್ರಮುಖ ಕ್ಷಣವಾಗಿದೆ. ಈ ದಿನದಂದು, ದೇಶದಿಂದ ಪೋಲಿಯೊವನ್ನು ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿರುವ ರಾಷ್ಟ್ರವ್ಯಾಪಿ ಉಪಕ್ರಮವಾದ ಪಲ್ಸ್ ಪೋಲಿಯೊ ಇಮ್ಯುನೈಸೇಶನ್ ಕಾರ್ಯಕ್ರಮದ ಅಡಿಯಲ್ಲಿ ಮೌಖಿಕ ಪೋಲಿಯೊ ಲಸಿಕೆಯ ಮೊದಲ ಡೋಸ್ ಅನ್ನು ನೀಡಲಾಯಿತು.

ಈ ಬೃಹತ್ ಪ್ರಯತ್ನವು 2014 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್‌ಒ) ಭಾರತವನ್ನು ಪೋಲಿಯೊ ಮುಕ್ತ ರಾಷ್ಟ್ರವೆಂದು ಘೋಷಿಸಲು ಕಾರಣವಾಯಿತು, ಇದು ಸಂಘಟಿತ ಲಸಿಕೆ ಅಭಿಯಾನಗಳ ಪರಿಣಾಮಕಾರಿತ್ವವನ್ನು ಒತ್ತಿಹೇಳುತ್ತದೆ.

**ರಾಷ್ಟ್ರೀಯ ಲಸಿಕಾ ದಿನದ ಮಹತ್ವ**

ರಾಷ್ಟ್ರೀಯ ಲಸಿಕೆ ದಿನವು ಬಹು ಉದ್ದೇಶಗಳನ್ನು ಪೂರೈಸುತ್ತದೆ:

**ಜಾಗೃತಿ ಮೂಡಿಸುವುದು:**

ಇದು ಮಾರಕ ರೋಗಗಳನ್ನು ತಡೆಗಟ್ಟುವಲ್ಲಿ ಲಸಿಕೆಗಳ ಮಹತ್ವದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುತ್ತದೆ.

**ಆರೋಗ್ಯ ಕಾರ್ಯಕರ್ತರನ್ನು ಶ್ಲಾಘಿಸುವುದು:**

ದೇಶಾದ್ಯಂತ ರೋಗನಿರೋಧಕ ಸೇವೆಗಳ ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಆರೋಗ್ಯ ವೃತ್ತಿಪರರ ಅವಿರತ ಪ್ರಯತ್ನಗಳನ್ನು ಈ ದಿನವು ಗೌರವಿಸುತ್ತದೆ.

**ರೋಗನಿರೋಧಕ ಶಕ್ತಿಯನ್ನು ಉತ್ತೇಜಿಸುವುದು:**

ಇದು ಸಮುದಾಯಗಳು ಲಸಿಕೆ ಅಭಿಯಾನಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ, ಹೆಚ್ಚಿನ ವ್ಯಾಪ್ತಿ ಮತ್ತು ಹಿಂದಿನ ರೋಗನಿರೋಧಕ ಶಕ್ತಿಯನ್ನು ಗುರಿಯಾಗಿರಿಸಿಕೊಳ್ಳುತ್ತದೆ.

**ಸಾರ್ವಜನಿಕ ಆರೋಗ್ಯದ ಮೇಲೆ ವ್ಯಾಕ್ಸಿನೇಷನ್ ಪರಿಣಾಮ**

**ಪೋಲಿಯೊ ನಿರ್ಮೂಲನೆ:**

ಪಲ್ಸ್ ಪೋಲಿಯೊ ರೋಗ ನಿರೋಧಕ ಕಾರ್ಯಕ್ರಮದ ಯಶಸ್ವಿ ಅನುಷ್ಠಾನವು ಪೋಲಿಯೊ ನಿರ್ಮೂಲನೆಗೆ ಕಾರಣವಾಯಿತು, 2014 ರಲ್ಲಿ ಭಾರತವನ್ನು ಪೋಲಿಯೊ ಮುಕ್ತ ಎಂದು ಘೋಷಿಸಲಾಯಿತು.

**ರೋಗಗಳ ಪ್ರಮಾಣ ಇಳಿಕೆ:**

ವ್ಯಾಪಕವಾದ ರೋಗನಿರೋಧಕ ಶಕ್ತಿಯು ದಡಾರ, ಧನುರ್ವಾಯು ಮತ್ತು ಡಿಫ್ತೀರಿಯಾದಂತಹ ಕಾಯಿಲೆಗಳಲ್ಲಿ ಗಣನೀಯ ಇಳಿಕೆಗೆ ಕಾರಣವಾಗಿದೆ, ಇದು ಮಕ್ಕಳ ಬದುಕುಳಿಯುವಿಕೆಯ ಪ್ರಮಾಣವನ್ನು ಸುಧಾರಿಸಲು ಕಾರಣವಾಗಿದೆ.

**ಆರೋಗ್ಯ ರಕ್ಷಣಾ ಮೂಲಸೌಕರ್ಯವನ್ನು ಬಲಪಡಿಸಲಾಗಿದೆ:**

ಲಸಿಕೆ ಕಾರ್ಯಕ್ರಮಗಳು ಭಾರತದ ಆರೋಗ್ಯ ರಕ್ಷಣಾ ಮೂಲಸೌಕರ್ಯವನ್ನು ಬಲಪಡಿಸಿವೆ, ಇತರ ಅಗತ್ಯ ಆರೋಗ್ಯ ಸೇವೆಗಳನ್ನು ಸಮರ್ಥವಾಗಿ ತಲುಪಿಸಲು ಅನುವು ಮಾಡಿಕೊಡುತ್ತವೆ.

# ವಿಶ್ವ ರಂಗಭೂಮಿ ದಿನ 2025

ವಿಶ್ವ ರಂಗಭೂಮಿ ದಿನವನ್ನು ಪ್ರತಿ ವರ್ಷ ಮಾರ್ಚ್ 27 ರಂದು ಆಚರಿಸಲಾಗುತ್ತದೆ ಇದನ್ನು 1961 ರಲ್ಲಿ ಅಂತರರಾಷ್ಟ್ರೀಯ ರಂಗಭೂಮಿ ಸಂಸ್ಥೆ ಸ್ಥಾಪಿಸಿತು. ಈ ದಿನವು ಸಾಂಸ್ಕೃತಿಕ ವಿನಿಮಯ ಮತ್ತು ಶಿಕ್ಷಣದಲ್ಲಿ ರಂಗಭೂಮಿಯ ಪಾತ್ರವನ್ನು ಉತ್ತೇಜಿಸುತ್ತದೆ. ವಿಶ್ವ ರಂಗಭೂಮಿ ದಿನವನ್ನು ವಾರ್ಷಿಕವಾಗಿ ಮಾರ್ಚ್ 27 ರಂದು ಆಚರಿಸಲಾಗುತ್ತದೆ, ಈ ದಿನವನ್ನು ರಂಗಭೂಮಿ ಕಲೆ, ಅದರ ಸಾಧಕರು ಮತ್ತು ಸಾಂಸ್ಕೃತಿಕ ವಿನಿಮಯ ಮತ್ತು ಮಾನವ ಅಭಿವ್ಯಕ್ತಿಯಲ್ಲಿ ಅದರ ಪಾತ್ರವನ್ನು ಗೌರವಿಸಲು ಮೀಸಲಿಡಲಾಗಿದೆ. ಈ ದಿನವು ಪ್ರಪಂಚದಾದ್ಯಂತದ ಸಮಾಜಗಳ ಮೇಲೆ ರಂಗಭೂಮಿಯ ಪ್ರಭಾವವನ್ನು ಪ್ರತಿಬಿಂಬಿಸಲು ಮತ್ತು ರಂಗಭೂಮಿ ಕಲೆಗಳ ಮಹತ್ವವನ್ನು ಎತ್ತಿ ತೋರಿಸಲು ಒಂದು ಅವಕಾಶವನ್ನು ಒದಗಿಸುತ್ತದೆ.

ವಿಶ್ವ ರಂಗಭೂಮಿ ದಿನವನ್ನು ಪ್ರತಿ ವರ್ಷ ಮಾರ್ಚ್ 27 ರಂದು ಆಚರಿಸಲಾಗುತ್ತದೆ. 2025 ರಲ್ಲಿ, ಈ ದಿನ ಗುರುವಾರ ಬರುತ್ತದೆ. ಈ ದಿನಾಂಕವು ಈ ಜಾಗತಿಕ ಆಚರಣೆಯನ್ನು ಮೊದಲು ಪ್ರಾರಂಭಿಸಿದ ಅಂತರರಾಷ್ಟ್ರೀಯ ರಂಗಭೂಮಿ ಸಂಸ್ಥೆಯ ವಾರ್ಷಿಕೋತ್ಸವವನ್ನು ಸೂಚಿಸುತ್ತದೆ.

**ವಿಶ್ವ ರಂಗಭೂಮಿ ದಿನದ ಇತಿಹಾಸ**

1948 ರಲ್ಲಿ ಯುನೆಸ್ಕೋ ಮತ್ತು ಅಂತರರಾಷ್ಟ್ರೀಯ ರಂಗಭೂಮಿ ಮಂಡಳಿಯಿಂದ ಸ್ಥಾಪಿಸಲ್ಪಟ್ಟ ಅಂತರರಾಷ್ಟ್ರೀಯ ರಂಗಭೂಮಿ ಸಂಸ್ಥೆ 1961 ರಲ್ಲಿ ವಿಶ್ವ ರಂಗಭೂಮಿ ದಿನವನ್ನು ಸ್ಥಾಪಿಸಿತು. ರಂಗಭೂಮಿಯ ಮಹತ್ವವನ್ನು ಒಂದು ಕಲಾ ಪ್ರಕಾರವಾಗಿ ಉತ್ತೇಜಿಸಲು ಮತ್ತು ಸಾಂಸ್ಕೃತಿಕ ವಿನಿಮಯ, ಶಿಕ್ಷಣ ಮತ್ತು ಸಮಾಜದಲ್ಲಿ ಅದು ವಹಿಸುವ ಮಹತ್ವದ ಪಾತ್ರವನ್ನು ಆಚರಿಸಲು ಈ ದಿನವನ್ನು ರಚಿಸಲಾಯಿತು.

ಪ್ರತಿ ವರ್ಷ, ವಿಶ್ವ ರಂಗಭೂಮಿ ದಿನದಂದು ರಂಗಭೂಮಿ ಸಮುದಾಯದ ಪ್ರಮುಖ ವ್ಯಕ್ತಿಯೊಬ್ಬರು ಬರೆದ ವಿಶೇಷ ಸಂದೇಶವನ್ನು ನೀಡಲಾಗುತ್ತದೆ. ಈ ಸಂದೇಶವನ್ನು ಹಲವಾರು ಭಾಷೆಗಳಿಗೆ ಅನುವಾದಿಸಿ ಪ್ರಪಂಚದಾದ್ಯಂತ ವಿತರಿಸಲಾಗುತ್ತದೆ, ಇದು ರಂಗಭೂಮಿಯ ಜಾಗತಿಕ ಸ್ವರೂಪ ಮತ್ತು ಸಂಸ್ಕೃತಿಗಳಾದ್ಯಂತ ಜನರನ್ನು ಸಂಪರ್ಕಿಸುವ ಅದರ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ.

**ವಿಶ್ವ ರಂಗಭೂಮಿ ದಿನದ ಮಹತ್ವ**

ವಿಶ್ವ ರಂಗಭೂಮಿ ದಿನವು ಬಹು ಉದ್ದೇಶಗಳನ್ನು ಪೂರೈಸುತ್ತದೆ, ಪ್ರತಿಯೊಂದೂ ರಂಗಭೂಮಿಯ ಮೆಚ್ಚುಗೆಗೆ ಮತ್ತು ಸಮಾಜದಲ್ಲಿ ಅದರ ಅನೇಕ ಪಾತ್ರಗಳಿಗೆ ಕೊಡುಗೆ ನೀಡುತ್ತದೆ. ಈ ದಿನವು ಮಹತ್ವದ್ದಾಗಿರಲು ಕೆಲವು ಪ್ರಮುಖ ಕಾರಣಗಳು ಇಲ್ಲಿವೆ:

**ರಂಗಭೂಮಿ ಕಲೆಯನ್ನು ಆಚರಿಸುವುದು:** ವಿಶ್ವ ರಂಗಭೂಮಿ ದಿನವು ರಂಗಭೂಮಿ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ನಟರು, ನಿರ್ದೇಶಕರು, ನಾಟಕಕಾರರು, ರಂಗಕರ್ಮಿಗಳು ಮತ್ತು ಇತರರ ಸೃಜನಶೀಲ ಅಭಿವ್ಯಕ್ತಿ, ಪ್ರತಿಭೆ ಮತ್ತು ಕಠಿಣ ಪರಿಶ್ರಮವನ್ನು ಗುರುತಿಸಲು ಮತ್ತು ಪ್ರಶಂಸಿಸಲು ಒಂದು ಅವಕಾಶವಾಗಿದೆ.

**ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುವುದು:** ರಂಗಭೂಮಿ ಸಾಂಸ್ಕೃತಿಕ ಮತ್ತು ಭಾಷಾ ಅಡೆತಡೆಗಳನ್ನು ಮೀರುವ ಜಾಗತಿಕ ಭಾಷೆಯಾಗಿದೆ. ವಿಶ್ವ ರಂಗಭೂಮಿ ದಿನವು ರಂಗಭೂಮಿಯು ವಿಭಿನ್ನ ಸಂಸ್ಕೃತಿಗಳ ನಡುವೆ ತಿಳುವಳಿಕೆಯನ್ನು ಸೃಷ್ಟಿಸುತ್ತದೆ ಮತ್ತು ಸಂವಹನವನ್ನು ಬೆಳೆಸುತ್ತದೆ ಎಂಬ ಕಲ್ಪನೆಯನ್ನು ಉತ್ತೇಜಿಸುತ್ತದೆ, ಇದು ಅಂತಿಮವಾಗಿ ಹೆಚ್ಚಿನ ಸಹಾನುಭೂತಿ ಮತ್ತು ಏಕತೆಗೆ ಕಾರಣವಾಗುತ್ತದೆ.

**ಕಲೆಗಳನ್ನು ಪ್ರತಿಪಾದಿಸುವುದು:** ರಂಗಭೂಮಿಯು ಆಗಾಗ್ಗೆ ಸೀಮಿತ ಹಣಕಾಸು ಅಥವಾ ಸಾರ್ವಜನಿಕ ಅರಿವಿನ ಕೊರತೆಯಂತಹ ಸವಾಲುಗಳನ್ನು ಎದುರಿಸುತ್ತದೆ. ವಿಶ್ವ ರಂಗಭೂಮಿ ದಿನದಂದು, ಭವಿಷ್ಯದ ಪೀಳಿಗೆಗೆ ರಂಗಭೂಮಿ ಅಭಿವೃದ್ಧಿ ಹೊಂದುವುದನ್ನು ಖಚಿತಪಡಿಸಿಕೊಳ್ಳಲು ಕಲೆಗಳನ್ನು ಬೆಂಬಲಿಸುವ ಮತ್ತು ಹೂಡಿಕೆ ಮಾಡುವ ಮಹತ್ವವನ್ನು ವಕೀಲರು ಎತ್ತಿ ತೋರಿಸುತ್ತಾರೆ.

**ಜಾಗೃತಿ ಮೂಡಿಸುವುದು:** ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು, ಮಾನವ ಹಕ್ಕುಗಳನ್ನು ಉತ್ತೇಜಿಸಲು ಮತ್ತು ವಿಶ್ವಾದ್ಯಂತ ಸಮುದಾಯಗಳ ಮೇಲೆ ಪರಿಣಾಮ ಬೀರುವ ಸಂಬಂಧಿತ ವಿಷಯಗಳೊಂದಿಗೆ ತೊಡಗಿಸಿಕೊಳ್ಳಲು ರಂಗಭೂಮಿಯ ಶಕ್ತಿಯ ಬಗ್ಗೆ ಜಾಗೃತಿ ಮೂಡಿಸಲು ಈ ದಿನವು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

**ಯುವ ಪ್ರತಿಭೆಗಳಿಗೆ ಸ್ಫೂರ್ತಿ:** ವಿಶ್ವ ರಂಗಭೂಮಿ ದಿನವು ಯುವಜನರು ತಮ್ಮ ಸೃಜನಶೀಲತೆಯನ್ನು ಅನ್ವೇಷಿಸಲು, ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಲು ಮತ್ತು ಕಲೆಗಳಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ಪ್ರೋತ್ಸಾಹಿಸುತ್ತದೆ. ಇದು ಮುಂದಿನ ಪೀಳಿಗೆಯನ್ನು ರಂಗಭೂಮಿ ಸಮುದಾಯವನ್ನು ಚೈತನ್ಯಶೀಲವಾಗಿಡಲು ಪ್ರೇರೇಪಿಸುತ್ತದೆ.

## ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಯಕ್ಸಂಬಾ.

# ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಬಹುಮಾನ ವಿತರಣಾ ಸಮಾರಂಭ




ಜೊಲ್ಲೆ ಎಜ್ಯುಕೇಶನ್ ಸೊಸಾಯಟಿಯ ಅಂಗ ಸಂಸ್ಥೆಯಾದ ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ದಿನಾಂಕ:– 15–03–2025 ರಂದು ಕ್ರೀಡಾ ವಿಭಾಗದಲ್ಲಿ ವಲಯ, ತಾಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಹಾಗೂ ಶಾಲೆಯಲ್ಲಿ ನಡೆದ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸಿ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹ ಸಂಸ್ಥಾಪಕರಾದ ಶಶಿಕಲಾ ಜೊಲ್ಲೆಯವರು ದೀಪ ಪ್ರಜ್ವಲನೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿ ಉತ್ತಮ ಶಿಕ್ಷಣ ಪಡೆದು ದೇಶ ಸೇವೆ ಹಾಗೂ ಸಮಾಜ ಸೇವೆಯಲ್ಲಿ ತಮ್ಮನ್ನು ತಾವೂ ತೊಡಗಿಸಿಕೊಂಡು ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ಹೊರಹೊಮ್ಮಿ ಎಂದು ತಿಳಿಸಿ ವಿದ್ಯಾರ್ಥಿಗಳಿಗೆ ಭೇಟಿಯಾಗಿ ಯೋಗಕ್ಷೇಮ ವಿಚಾರಿಸಿ ಮುಂಬರುವ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ಶುಭಾಶಯವನ್ನು ಕೋರಿದರು.

ಮುಖ್ಯ ಅತಿಥಿಗಳಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ, ನಿಪ್ಪಾಣಿ ಪ್ರಾಂಶುಪಾಲರಾದ ದೀಪಕ ಪಾಟೀಲ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಯು ಜೀವನದಲ್ಲಿ ಯಶಸ್ವಿಯಾಗಬೇಕಾದರೆ ವಿದ್ಯಾರ್ಥಿಯು ಧನಾತ್ಮಕ ವಿಚಾರಗಳೊಂದಿಗೆ ಅಧ್ಯಯನವನ್ನು ಮಾಡುವುದರ ಮೂಲಕ ಇಚ್ಛಾಶಕ್ತಿ, ನಿರಂತರವಾದ ಶ್ರಮ, ಸಾಧಿಸಲೆಬೇಕೆಂಬ ಛಲ, ಜವಾಬ್ದಾರಿ ಈ ನಾಲ್ಕು ಅಂಶಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕ. ಈ ಸಂದರ್ಭದಲ್ಲಿ 10 ನೇ ತರಗತಿಯಲ್ಲಿ ಓದುತ್ತಿರುವ ಆಕಾಶ ಸಂತೋಷ ಸಂಕಪಾಳ ಹಾಗೂ ತನುಜಾ ಶ್ರಾವಣ ಕುರಾಡೆ ಇವರಿಗೆ ಆದರ್ಶ ವಿದ್ಯಾರ್ಥಿ/ನಿ ಪ್ರಶಸ್ತಿ, ಪ್ರಾಥಮಿಕ ವಿಭಾಗದಲ್ಲಿ ಲಕ್ಷ್ಮೀ ವೃಷಭ ಬಾಳಿಕಾಯಿ, ಪ್ರೌಢ ವಿಭಾಗದಲ್ಲಿ ಶ್ರದ್ಧಾ ಸಂತೋಷ ಪೂಜಾರಿ ಇವರಿಗೆ ಸಮಗ್ರ ವೀರಾಗ್ರಣಿ ಪ್ರಶಸ್ತಿ ನೀಡಲಾಯಿತು ಹಾಗೂ ನಿರಂತರವಾಗಿ 25 ವರ್ಷಗಳ ಕಾಲ ಶಿವಶಂಕರ ಜೊಲ್ಲೆ ಕನ್ನಡ ಶಾಲೆಯಲ್ಲಿ ಕಾರ್ಯನಿರ್ವಹಿಸಿ ಸೇವಾ ನಿವೃತ್ತಿ ಹೊಂದಿರುವ ಎಸ್.ಬಿ.ಹಲಕಾಟೆ ಇವರನ್ನು ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ಎಲ್ಲ ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ವ್ಹಿ.ಆರ್.ಭಿವಸೆ ಪ್ರಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಪೂರ್ವ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯನಿಯರಾದ ಎಸ್ ಜಿ ಕಾಮತ್ ವಂದಿಸಿದರು. ಎಸ್ ಆರ್ ಚಂದಗಡೆ ನಿರೂಪಿಸಿದರು.

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ







ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ ಇದರ ನೂತನವಾಗಿ ನಿರ್ಮಿಸಿದ 270 ಕಿಲೋ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಜೊಲ್ಲೆ ಗ್ರೂಪ್ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ಆಶಾ ಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಅವರು ಉದ್ಘಾಟಿಸಿದರು.




ಶ್ರೀ ಬೀರೇಶ್ವರ ಕೋ ಆಫ್ ಕ್ರೆಡಿಟ್ ಸೊಸಾಯಿಟಿ ಲಿ., ಯಕ್ಸಂಬಾ (ಮಲ್ಟಿ– ಸ್ಟೇಟ್)ಗೆ ಆಗಮಿಸಿದ ನೀಡಸೋಸಿ ದುರದುಂಡೇಶ್ವರ ಮಠದ ಜಗದ್ಗುರು ಪ.ಪೂಜ್ಯ.ಶ್ರೀ ಪಂಚಮಶಿವಲಿಂಗೇಶ್ವರ ಸ್ವಾಮಿಜಿ ಹಾಗೂ ಚಿಕ್ಕೋಡಿ ಚರಮೂರ್ತಿ ಮಠದ ಪ.ಪೂ.ಶ್ರೀ ಸಂಪದನಾ ಸ್ವಾಮೀಜಿಗಳು ಸಂಸ್ಥೆಗೆ ಭೇಟಿ ನೀಡಿದಾಗ ಅವರನ್ನು ಬಸವಜ್ಯೋತಿ ಯುಥ್ ಫೌಂಡೇಷನ್ ಅಧ್ಯಕ್ಷರಾದ ಶ್ರೀ. ಬಸವಪ್ರಸಾದ ಜೊಲ್ಲೆ ಆತ್ಮೀಯವಾಗಿ ಬರಮಾಡಿಕೊಂಡು ಅವರನ್ನು ಸತ್ಕರಿಸುತ್ತಿರುವುದು.




ನಿಪ್ಪಾಣಿ ಮತಕ್ಷೇತ್ರದ ಭೋಜ ಕ್ರಾಸ್ ದಿಂದ ನೇಜ ಕ್ರಾಸ ವರೆಗೆ 2.50 ಕಿ.ಮೀ.ರಸ್ತೆಯನ್ನು ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಲೋಕಾರ್ಪಣೆಗೋಳಿಸಿದ ದೃಶ್ಯ.




ನಿಪ್ಪಾಣಿಯ ಶ್ರೀ ಹಾಲಸಿದ್ದನಾಥ ಸಕ್ಕರೆ ಕಾರ್ಖಾನೆಯ ನಿಯಮಿತ., ನಿಪ್ಪಾಣಿ (ಮಲ್ಟಿ-ಸ್ಟೇಟ್) ವತಿಯಿಂದ ಅಗ್ನಿಶಾಮಕ ಮತ್ತು ತುರ್ತು ಸೇವೆ ವಾಹನಕ್ಕೆ ಜೊಲ್ಲೆ ಗ್ರುಪ್ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರು ಪೂಜೆ ನೆರವೇರಿಸಿ, ಚಾಲನೆ ನೀಡಿದ ದೃಶ್ಯ.




ನಿಪ್ಪಾಣಿ ಮತಕ್ಷೇತ್ರದ ಬೋರಗಾಂವ ಪಟ್ಟಣದಲ್ಲಿ 3 ಕೋಟಿ ರೂ ಅನುದಾನದಲ್ಲಿ ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗೆ ಜೊಲ್ಲೆ ದಂಪತಿ ಚಾಲನೆ ನೀಡುತ್ತಿರುವುದು.




ಶ್ರೀ ಬೀರೇಶ್ವರ ಕೋ ಆಫ್ ಕ್ರೆಡಿಟ್ ಸೊಸಾಯಿಟಿ ಲಿ.,(ಮಲ್ಟಿ-ಸ್ಟೇಟ್) ಮುಖ್ಯ ಕಛೇರಿಗೆ ಆಗಮಿಸಿದ ನಿಪ್ಪಾಣಿ ನಗರದ ಯೋಜನೆ (Nippani Town Planning) ಅಧ್ಯಕ್ಷರಾದ ಶ್ರೀ ಸಂಯೋಜಿತ ಉರ್ಫ್ ನಿಕು ಪಾಟೀಲ ಸೌಹಾರ್ದಯುತವಾಗಿ ನಮ್ಮ ಸಂಸ್ಥೆಗೆ ಭೇಟಿ ನೀಡಿದಾಗ ಅವರನ್ನು ಜೊಲ್ಲೆ ದಂಪತಿ ಆತ್ಮೀಯವಾಗಿ ಬರಮಾಡಿಕೊಂಡು ಸತ್ಕರಿಸುತ್ತಿರುವುದು.




ನಿಪ್ಪಾಣಿ ಛಾಯಾಗ್ರಾಹಕರ ಹಾಗೂ ವಿಡಿಯೋಗ್ರಾಫರ್ ಕ್ಷೇಮಾಭಿವೃದ್ಧಿ ಸಂಘದಲ್ಲಿ ಉಚಿತವಾಗಿ ನೊಂದಾಯಿತರಾದ 80 ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ನೀಡುವ ಕಾರ್ಯಕ್ರಮವನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಉದ್ಘಾಟಿಸುತ್ತಿರುವುದು.




ನಿಪ್ಪಾಣಿ ಮತಕ್ಷೇತ್ರದ ಯರನಾಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೃಷಿ ಇಲಾಖೆ ಹಾಗೂ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಕಿರು ಜಲಾನಯನ ಅಭಿವೃದ್ದಿ ಘಟಕ 2.0 ವತಿಯಿಂದ 5 ಕೋಟಿ 26 ಲಕ್ಷ ರೂ. ಮೊತ್ತದಲ್ಲಿ "ಜಲಾನಯನ ಯಾತ್ರೆ" ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮವಕ್ಕೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.




ನಿಪ್ಪಾಣಿ ಮತಕ್ಷೇತ್ರದ ಮಾಂಗೂರ ಗ್ರಾಮದಲ್ಲಿ 1 ಕೋಟಿ 60 ಲಕ್ಷ ರೂ ಅನುದಾನದಲ್ಲಿ ಮಾಂಗುರ ಗ್ರಾಮ ಪರಿಮಿತಿಯಲ್ಲಿ ಡಾಂಬರೀಕರಣ, ಗ್ರಾಮದ ಮುಖ್ಯ ರಸ್ತೆಯಿಂದ ಬೈರವನಾಥ ಹೈಸ್ಕೂಲ್ ವರೆಗೆ ಸಿ.ಸಿ.ರಸ್ತೆ ಹಾಗೂ ಗರಡಿಮನೆಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡಿದ ದೃಶ್ಯ.




ನಿಪ್ಪಾಣಿ ನಗರದಲ್ಲಿ 61 ಲಕ್ಷ 31 ಸಾವಿರ ರೂ. ಮೊತ್ತದಲ್ಲಿ, ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಥಮಿಕ ಶಾಲೆಗೆ 2 ನೂತನ ಕೊಠಡಿ ನಿರ್ಮಾಣ ಮತ್ತು ಪ್ರೌಢ ಶಾಲೆಗೆ 1 ಕೊಠಡಿ ನಿರ್ಮಾಣ ಕಾಮಗಾರಿಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡುತ್ತಿರುವುದು.




ಜೊಲ್ಲೆ ಗ್ರೂಪ್‌ನ ಅಂಗಸಂಸ್ಥೆಯಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿಯಮಿತ., ಯಕ್ಸಂಬಾ ಮುಖ್ಯ ಕಚೇರಿ ನಿರ್ದೇಶಕರಾದ ಶ್ರೀ ಜಗದೀಶ ಹಿಂಗ್ಲಜೆ ಮತ್ತು ಶ್ರೀ ಲಕ್ಷ್ಮಣ ಪ್ರಭಾತ ಹಾಗೂ ಸಿಬ್ಬಂದಿಯಾದ ಶ್ರೀ ಅರುಣಕುಮಾರ ಫರಾಳೆ ಅವರಿಗೆ ಸಹಕಾರಿ ಸಂಘದಿಂದ ಮಂಜೂರಾದ ರೂ. 1,16,000/- ವೈದ್ಯಕೀಯ ಧನ ಸಹಾಯ ಪತ್ರವನ್ನು ಜೊಲ್ಲೆ ಗ್ರುಪ್ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರು ವಿತರಿಸುತ್ತಿರುವುದು.